**B**

SL. No. : H

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]
**ಸಂಕೇತ ಸಂಖ್ಯೆ : 97-K**

**CCE RR**
**Revised & Unrevised**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8
**Code No. : 97-K**

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಭಾಷಾಂತರ / Kannada Version)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 24. 06. 2019 ] [ Date : 24. 06. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

ಇಲ್ಲಿ ಕತ್ತರಿಸಿ

**Tear here**

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಗ್ರಾಮ ಪಂಚಾಯಿತಿಗಳು ಭಾರತ ಸ್ವಾಯತ್ತ ಸರ್ಕಾರದ ತಳಹದಿಯಾಗಿವೆ ಎಂದು ಹೇಳಿದವರು

   (A) ಡಾ. ಬಿ.ಆರ್. ಅಂಬೇಡ್ಕರ್

   (B) ಜ್ಯೋತಿಬಾ ಫುಲೆ

   (C) ಹೆಚ್.ಜೆ. ಲಾಸ್ಕಿ

   (D) ಮಹಾತ್ಮ ಗಾಂಧಿ

2. ರಾಜ್ಯಪಾಲರು ಈ ಸಮುದಾಯದ ಒಬ್ಬರನ್ನು ರಾಜ್ಯ ವಿಧಾನಸಭೆಗೆ ನಾಮಕರಣ ಮಾಡುವರು

   (A) ಆಂಗ್ಲೋ–ಅಮೆರಿಕನ್ ಸಮುದಾಯದಿಂದ

   (B) ಆಂಗ್ಲೋ–ಇಂಡಿಯನ್ ಸಮುದಾಯದಿಂದ

   (C) ಆಂಗ್ಲೋ–ಯುರೋಪಿಯನ್ ಸಮುದಾಯದಿಂದ

   (D) ಆಂಗ್ಲೋ–ಆಫ್ರಿಕನ್ ಸಮುದಾಯದಿಂದ

3. ಭೂಕಂದಾಯ ದಾಖಲೆಗಳ ಸಂರಕ್ಷಣೆ, ತೆರಿಗೆ ವಸೂಲಾತಿಗೆ ಸಂಬಂಧಿಸಿದ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ನ್ಯಾಯಾಲಯ

   (A) ಕಂದಾಯ ನ್ಯಾಯಾಲಯ

   (B) ಜಿಲ್ಲಾ ನ್ಯಾಯಾಲಯ

   (C) ಗ್ರಾಹಕ ನ್ಯಾಯಾಲಯ

   (D) ಲೋಕ ಅದಾಲತ್

4. ರಾಜ್ಯ ಕಾರ್ಯಾಂಗದ ಸಂವಿಧಾನಾತ್ಮಕ ಮುಖ್ಯಸ್ಥರು

   (A) ಮುಖ್ಯಮಂತ್ರಿಗಳು

   (B) ಸಭಾಪತಿಗಳು

   (C) ರಾಜ್ಯಪಾಲರು

   (D) ಉಪಸಭಾಪತಿಗಳು

5. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನಿವೃತ್ತಿಯ ವಯಸ್ಸು

(A) 60 ವರ್ಷಗಳು

(B) 65 ವರ್ಷಗಳು

(C) 62 ವರ್ಷಗಳು

(D) 58 ವರ್ಷಗಳು

6. ಭಾರತದ ರಾಷ್ಟ್ರಪತಿಗಳು ರಾಜ್ಯಸಭೆಗೆ ನಾಮಕರಣ ಮಾಡುವ ಸದಸ್ಯರ ಸಂಖ್ಯೆ

(A) 20

(B) 10

(C) 12

(D) 18

7. ಜಪಾನಿನ ಶಾಸಕಾಂಗ

(A) ಪಾರ್ಲಿಮೆಂಟ್

(B) ತ್ಸೆಂಗ್‌ಡು

(C) ಕಾಂಗ್ರೆಸ್

(D) ಡಯಟ್

8. ಭಾರತದ ರಾಷ್ಟ್ರಪತಿಗಳು ಪ್ರಮಾಣವಚನ ಸ್ವೀಕರಿಸುವುದು

(A) ಭಾರತದ ಉಪರಾಷ್ಟ್ರಪತಿಗಳಿಂದ

(B) ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ

(C) ಭಾರತದ ಪ್ರಧಾನ ಮಂತ್ರಿಗಳಿಂದ

(D) ಲೋಕಸಭೆಯ ಸಭಾಪತಿಗಳಿಂದ

9. "ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವ ಸರ್ಕಾರವೇ ಪ್ರಜಾಪ್ರಭುತ್ವ" ಎಂದು ಹೇಳಿದವರು

(A) ಅಬ್ರಹಾಂ ಲಿಂಕನ್

(B) ಜೆ.ಎಸ್. ಮಿಲ್

(C) ಪೆರಿಕ್ಲಸ್

(D) ಕಾರ್ಲ್ ಮಾರ್ಕ್ಸ್

10. ಕಲ್ಕತ್ತದಲ್ಲಿ ಸರ್ವೋಚ್ಚ ನ್ಯಾಯಾಲಯವನ್ನು ಸ್ಥಾಪಿಸಿದ ಶಾಸನ

(A) ಮಾರ್ಲೆ–ಮಿಂಟೋ ಸುಧಾರಣೆಗಳು 1909

(B) 1833 ರ ಸನ್ನದು

(C) ರೆಗ್ಯೂಲೇಟಿಂಗ್ ಆ್ಯಕ್ಟ್ 1773

(D) 1858 ರ ಶಾಸನ

II. 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

5 × 1 = 5

| ***A* ಪಟ್ಟಿ** | ***B* ಪಟ್ಟಿ** |
|---|---|
| (A) ರಾಷ್ಟ್ರಪತಿಗಳು | (i) ರಾಜ್ಯಸಭೆಯ ಮುಖ್ಯಸ್ಥರು |
| (B) ಉಪರಾಷ್ಟ್ರಪತಿಗಳು | (ii) ರಾಜ್ಯದ ಪ್ರಥಮ ಪ್ರಜೆ |
| (C) ಪ್ರಧಾನಮಂತ್ರಿಗಳು | (iii) ವಿಧಾನ ಪರಿಷತ್ ಮುಖ್ಯಸ್ಥರು |
| (D) ಸಭಾಪತಿಗಳು | (iv) ಕೇಂದ್ರಾಡಳಿತ ಪ್ರದೇಶದ ಮುಖ್ಯಮಂತ್ರಿ |
| (E) ರಾಜ್ಯಪಾಲರು | (v) ರಾಷ್ಟ್ರದ ಪ್ರಥಮ ಪ್ರಜ |
| | (vi) ಲೋಕಸಭೆಯ ಮುಖ್ಯಸ್ಥರು |
| | (vii) ಕೇಂದ್ರ ಸರ್ಕಾರದ ಮುಖ್ಯಸ್ಥರು |

III. **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 15 × 1 = 15

12. ಕರ್ನಾಟಕ ಲೋಕಸೇವಾ ಆಯೋಗದ ಕೇಂದ್ರ ಕಚೇರಿ ಎಲ್ಲಿದೆ ?

13. ಭಾರತದ ಸ್ಥಳೀಯ ಸರ್ಕಾರ ವ್ಯವಸ್ಥೆಯ ಪಿತಾಮಹ ಎಂದು ಯಾರನ್ನು ಕರೆಯಲಾಗಿದೆ ?

14. ಲೋಕ ಅದಾಲತ್ತನ್ನು ಏಕೆ ಸ್ಥಾಪಿಸಲಾಗಿದೆ ?

15. ಗ್ರಾಹಕ ನ್ಯಾಯಾಲಯಗಳನ್ನು ಏಕೆ ಸ್ಥಾಪಿಸಲಾಗಿದೆ ?

16. ಕೋರಂ ಎಂದರೇನು ?

17. ರಾಜ್ಯಪಾಲರಿಗೆ ವೇತನವನ್ನು ಯಾವ ನಿಧಿಯಿಂದ ನೀಡಲಾಗುತ್ತದೆ ?

18. ದೇಶದಲ್ಲಿ ಅತ್ಯಂತ ಹೆಚ್ಚು ವಿಧಾನಸಭಾ ಸದಸ್ಯರನ್ನು ಹೊಂದಿರುವ ರಾಜ್ಯ ಯಾವುದು ?

19. ರಾಜ್ಯ ಸರ್ಕಾರದ ಸಮಸ್ತ ಅಧಿಕಾರದ ಸೂತ್ರದಾರ ಯಾರು ?

20. ಭಾರತದ ಸರ್ವೋಚ್ಚ ನ್ಯಾಯಾಲಯವು ತನ್ನ ವಿಶೇಷ ಅನುಮತಿ ಅರ್ಜಿ ಅಧಿಕಾರವನ್ನು ಹೇಗೆ ಚಲಾಯಿಸುತ್ತದೆ ?

21. ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ವೇತನ ಮತ್ತು ಭತ್ಯೆಗಳನ್ನು ನಿರ್ಧರಿಸುವವರು ಯಾರು ?

22. ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಧೀಶರನ್ನು ನೇಮಕ ಮಾಡುವವರು ಯಾರು ?

23. ಅಮೆರಿಕಾ ಸಂಯುಕ್ತ ಸಂಸ್ಥಾನದ ಮೇಲ್ಮನೆಯನ್ನು ಏನೆಂದು ಕರೆಯಲಾಗಿದೆ ?

24. ಭಾರತದ ರಾಷ್ಟ್ರಪತಿ ಚುನಾವಣಾ ವಿಧಾನವನ್ನು ಯಾವ ಸಂವಿಧಾನದಿಂದ ಎರವಲು ಪಡೆಯಲಾಗಿದೆ ?

25. ಭಾರತ ಸಂವಿಧಾನದ 21A ವಿಧಿಯ ಪ್ರಾಮುಖ್ಯತೆ ಏನು ?

26. ಭಾರತದಲ್ಲಿ ಸಂವಿಧಾನದ ರಚನಾ ಸಭೆಯನ್ನು ಸ್ಥಾಪಿಸಬೇಕೆಂದು ಬಲವಾಗಿ ಆಗ್ರಹಪಡಿಸಿದವರು ಯಾರು ?

IV. **ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** $14 \times 2 = 28$

27. ಯಾವ ರಾಜ್ಯಗಳು ಜಂಟಿ ಲೋಕಸೇವಾ ಆಯೋಗವನ್ನು ಸ್ಥಾಪನೆ ಮಾಡಿಕೊಂಡಿವೆ ?

28. ಗ್ರಾಮಸಭೆಯು ಗ್ರಾಮೀಣ ಸ್ವಯಂ ಆಡಳಿತ ಸಂಸ್ಥೆಯ ಪ್ರಾಥಮಿಕ ಘಟಕವಾಗಿದೆ. ವಿವರಿಸಿ.

29. ಜಿಲ್ಲಾ ಪಂಚಾಯಿತಿಯ ಹಣಕಾಸಿನ ಮೂಲಗಳು ಯಾವುವು ?

30. ರಾಜ್ಯ ಶಾಸಕಾಂಗದಲ್ಲಿ ವಿಧಾನ ಪರಿಷತ್ತಿನ ಅಗತ್ಯತೆ ಪ್ರಮುಖವಾಗಿದೆ. ಏಕೆ ?

31. ರಾಜ್ಯಪಾಲರ ಹಣಕಾಸಿನ ಅಧಿಕಾರಗಳನ್ನು ತಿಳಿಸಿ.

32. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಸಾಮಾಜಿಕ ಪರಿವರ್ತನೆಯ ನ್ಯಾಯಿಕ ಸಾಧನವೆಂದು ಪರಿಗಣಿಸಲಾಗಿದೆ. ಏಕೆ ?

33. ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರುಗಳಿಗಿರುವ ವಿನಾಯಿತಿಗಳನ್ನು ಪಟ್ಟಿ ಮಾಡಿ.

34. ಹಣಕಾಸಿನ ವಿಷಯದಲ್ಲಿ ಲೋಕಸಭೆಗೆ ರಾಜ್ಯಸಭೆಗಿಂತ ಹೆಚ್ಚಿನ ಅಧಿಕಾರವಿದೆ. ವಿವರಿಸಿ.

35. ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಅಳವಡಿಸಲಾ ಉದಾರವಾದಿದ ತತ್ವಗಳನ್ನು ತಿಳಿಸಿ.

36. ಭಾರತ ಸಂವಿಧಾನದ ಯಾವ ವಿಧಿಗಳು ರಾಷ್ಟ್ರಪತಿಗಳ ತುರ್ತು ಪರಿಸ್ಥಿತಿಯ ಅಧಿಕಾರಗಳನ್ನು ವಿವರಿಸುತ್ತವೆ ?

37. ಮಾಹಿತಿ ಹಕ್ಕು ಕಾಯ್ದೆಯು ಭ್ರಷ್ಟಾಚಾರವನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ವಿಶ್ಲೇಷಿಸಿ.

38. ಭಾರತವು ಒಂದು ಗಣರಾಜ್ಯವಾಗಿದೆ. ಹೇಗೆ ?

39. ಸಮಾನತೆಯನ್ನು ವ್ಯಾಖ್ಯಾನಿಸಿ.

40. 1947 ರ ಭಾರತ ಸ್ವಾತಂತ್ರ್ಯ ಕಾಯ್ದೆಯ ನಿಬಂಧನೆಗಳು ಯಾವುವು ?

V. **ಈ ಕೆಳಗಿನ ಪ್ರಶ್ನೆಗಳಿಗೆ *ಐದರಿಂದ* ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

41. ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

42. ಅಧೀನ ನ್ಯಾಯಾಲಯಗಳು ಉಚ್ಚ ನ್ಯಾಯಾಲಯದಿಂದ ಹೇಗೆ ನಿಯಂತ್ರಿಸಲ್ಪಟ್ಟಿವೆ ?

43. ಕೇಂದ್ರ ಶಾಸಕಾಂಗವು ಸರ್ಕಾರವನ್ನು ಹೇಗೆ ನಿಯಂತ್ರಿಸುತ್ತದೆ ?

44. ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಅಳವಡಿಸಲಾದ ಗಾಂಧೀವಾದದ ತತ್ವಗಳನ್ನು ತಿಳಿಸಿ.

45. ಸರ್ವೋಚ್ಛ ನ್ಯಾಯಾಲಯವು ಮೂಲಭೂತ ಹಕ್ಕುಗಳಿಗೆ ಧಕ್ಕೆಯುಂಟಾದಾಗ ಹೊರಡಿಸುವ ಐದು ರೀತಿಯ ಆಜ್ಞೆಗಳನ್ನು ಹೆಸರಿಸಿ.

46. ಭಾರತದ ಸಂವಿಧಾನದಲ್ಲಿರುವ ಪ್ರಮುಖ ಅಂಶಗಳನ್ನು 1935 ರ ಭಾರತ ಸರ್ಕಾರದ ಕಾಯ್ದೆಯಿಂದ ತೆಗೆದುಕೊಳ್ಳಲಾಗಿದೆ. ವಿವರಿಸಿ.

VI. **ಈ ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ :** $1 \times 4 = 4$

47. ರಾಜ್ಯನೀತಿ ನಿರ್ದೇಶಕ ತತ್ವಗಳು ಮೂಲಭೂತ ಹಕ್ಕುಗಳಿಗಿಂತ ಭಿನ್ನವಾಗಿವೆ. ಹೇಗೆ ?